

# ಮರಳಿ ಬಂದ ಕಾಜೋಲ್


**ಕಾ**ಜೋಲ್ ಮತ್ತೆ ಕ್ಯಾಮೆರಾ ಎದುರಿಸುತ್ತಿದ್ದಾಳೆ. ಎರಡನೆ ಹೆರಿಗೆಯ ರಜೆ ಮುಗಿದಿದೆ. ಕಳೆದ ಸೆಪ್ಟೆಂಬರ್‌ನಿಂದ ಸಿನಿ ಕ್ಯಾಮೆರಾಗಳ ಎದುರಿಂದ ಕಾಣೆಯಾಗಿದ್ದ ಕಾಜೋಲ್ ಇದೀಗ ಜಾಹೀರಾತು ಚಿತ್ರಗಳ ಸಲುವಾಗಿ ಕ್ಯಾಮೆರಾ ಎದುರಿಸಿದ್ದಾಳೆ. ಸದ್ಯಕ್ಕೆ ಆಕೆಯ ಕೈಯಲ್ಲಿ ಮೂರು ಜಾಹೀರಾತುಗಳಿವೆಯಂತೆ. ನಿರ್ಮಾಪಕರು ಕರೆದರೆ ಸಿನಿಮಾದಲ್ಲಿ ಹೊಸ ಇನಿಂಗ್ಸ್ ಆರಂಭಿಸಲೂ ಸಿದ್ದ ಎಂದಿದ್ದಾಳೆ ಆಕೆ.

ಹೆರಿಗೆಗೂ ಮುನ್ನ ಕಾಜೋಲ್ ಅರ್ಜುನ್ ರಾಂಪಾಲ್ ಮತ್ತು ಕರೀನಾ ಅಭಿನಯದ 'ವಿ ಆರ್ ಫ್ಯಾಮಿಲಿ' ಎಂಬ ಚಿತ್ರದಲ್ಲಿ ನಟಿಸಿದ್ದಳು. ಆದರೆ ಆ ಚಿತ್ರ ಎಲ್ಲಿ ಹೋಯಿತೋ ಗೊತ್ತೇ ಆಗಲಿಲ್ಲ. ಹಾಗೆಂದು ಕಾಜೋಲ್‌ಗೆ ಬೇಡಿಕೆ ಇಲ್ಲವೆಂದಲ್ಲ. ಎರಡನೇ ಹೀರೋಯಿನ್ ಆಗಿ ಸವಾಲಿನ ಪಾತ್ರಗಳಿದ್ದರೆ ನಟಿಸಲು ಆಕೆ ಸಿದ್ಧವಂತೆ. ಆಕೆಗೆಂದೇ ಸಿನಿಮಾ ಕಥೆ ಬರೆಯಲು ಮತ್ತೆ ಗೆಳೆಯ ಕರಣ್ ಜೋಹರೇ ಮನಸ್ಸು ಮಾಡಬೇಕೇನೋ? ಅಥವಾ ಗಂಡ ಅಜಯ್ ಏನಾದರೂ ಪತ್ನಿಯ ಪುನರ್ವಸತಿಗೆ ಮನಸ್ಸು ಮಾಡಬಹುದೆ?

# ಅನಿಲ್ ಹಾಲಿವುಡ್‌ಗೆ

**'ಸ್ಲ**ಂಡಾಗ್ ಮಿಲಿಯನೇರ್' ಚಿತ್ರದ ಬಳಿಕ ಅನಿಲ್ ಕಪೂರ್‌ನ ಹಾಲಿವುಡ್ ಓಡಾಟ ಹೆಚ್ಚಾಗಿತ್ತು. ಆದರೆ ಅಲ್ಲಿ ಹೇಳಿಕೊಳ್ಳುವಂತಹ ಪಾತ್ರಗಳೇನೂ ಸಿಗಲಿಲ್ಲ. ಫ್ರೀಡಾ ಪಿಂಟೋಳಂತೆ ಹೆಸರು ಮಾಡಲೂ ಆಗಲಿಲ್ಲ.

ಇದೀಗ ಬಂದಿರುವ ಸುದ್ದಿ ಏನೆಂದರೆ ಕೊನೆಗೂ ಅನಿಲ್‌ಗೆ ಹಾಲಿವುಡ್‌ನಲ್ಲಿ



ಅತ್ಯುತ್ತಮ ಪಾತ್ರವೊಂದು ಸಿಕ್ಕಿದೆಯಂತೆ. ಈ ಹಿಂದೆ 'ದಿ ಬ್ಯಾಂಕ್ ಜಾಬ್' ಮತ್ತು 'ದಿ ರಿಕ್ರೂಟ್' ಎಂಬ ಚಿತ್ರಗಳನ್ನು ನಿರ್ದೇಶಿಸಿರುವ ಹೆಸರಾಂತ ನಿರ್ದೇಶಕ ರೋಜರ್ ಡೊನಾಲ್ಡ್‌ಸನ್‌ನ ಮುಂದಿನ ಚಿತ್ರ 'ಸಿಟೀಸ್'ನಲ್ಲಿ ಅನಿಲ್‌ಗೆ ಒಳ್ಳೆಯ ಪಾತ್ರವೊಂದು ದಕ್ಕಿದೆ. ಇದೊಂದು ಹಣಕಾಸು ಥ್ರಿಲ್ಲರ್ ಕಥೆಯಂತೆ! ಸಹಟನ ಕ್ಲೈವ್ ಓವೆನ್ ಜತೆ ಅನಿಲ್ ಕೂಡಾ ಮಿಂಚಲಿದ್ದಾನೆ. ಚಿತ್ರದ ಶೂಟಿಂಗ್ ಅಕ್ಟೋಬರ್‌ನಲ್ಲಿ ಆರಂಭವಾಗಲಿದ್ದು, ಲಂಡನ್, ನ್ಯೂಯಾರ್ಕ್ ಜತೆಗೆ ಮುಂಬೈಯಲ್ಲೂ ಶೂಟಿಂಗ್ ನಡೆಯಲಿರುವುದು ವಿಶೇಷ.

# ಶಾರೂಕ್ ಕಿಸ್

ಸದ್ಯಕ್ಕಂತೂ ಬಾಲಿವುಡ್ ದೊಡ್ಡ ಚರ್ಚೆಯ ಸಂಗತಿ ಎಂದರೆ ಶಾರೂಕನ ಕಿಸ್! ಒಂದೆಡೆ ಐಪಿಎಲ್ ಕ್ರಿಕೆಟ್‌ನ ಟೆನ್ಶನ್‌ನಲ್ಲಿರುವ ಈ ಕೋಲ್ಕತ್ತಾ ಪ್ರಿಯ ಇನ್ನೊಂದೆಡೆ ತನ್ನ ಹೊಸ ಚಿತ್ರ 'ರಾ 1' ಯಶಸ್ಸಿಗಾಗಿ ಎಲ್ಲ ಪ್ರಚಾರ ತಂತ್ರಗಳನ್ನೂ ಬಳಸುತ್ತಿದ್ದಾನೆ. ರಾ–1 ಚಿತ್ರದಲ್ಲಿ ಇದೇ ಮೊದಲ ಬಾರಿಗೆ ತೆರೆಯ ಮೇಲೆ ಶಾರೂಕ್ ತನ್ನ ಹೀರೋಯಿನ್‌ನನ್ನು ಚುಂಬಿಸಲಿದ್ದಾನೆ ಎನ್ನುವುದೀಗ ದೊಡ್ಡ ಸುದ್ದಿ.

ಶಾರೂಕ್ ಬೆಳ್ಳಿತೆರೆಗೆ ದಾಳಿಯಿಟ್ಟು 22 ವರ್ಷಗಳಾದವು. ಈವರೆಗೆ ಯಾವ ಚಿತ್ರದಲ್ಲೂ ಹೀರೋಯಿನ್ ತುಟಿಗೆ ತುಟಿ ಇಟ್ಟು ಚುಂಬಿಸಿಲ್ಲ. ಈಗ ಕರೀನಾ ಕಪೂರ್‌ಗೆ ಆ ಭಾಗ್ಯ ಬಂದಿದೆಯಂತೆ. ಇಬ್ಬರ ದೀರ್ಘ ಚುಂಬನದ ದೃಶ್ಯಗಳು ಚಿತ್ರದಲ್ಲಿ ಇವೆಯಂತೆ. 'ಅಶೋಕಾ' ಚಿತ್ರದಲ್ಲಿ ಪ್ರಚೋದಕ ದೃಶ್ಯಗಳಿಂದ ಮಿಂಚಿದ ಈ ಜೋಡಿ ಈಗ ರಾ–1 ಚಿತ್ರದಲ್ಲೂ ಪ್ರೇಕ್ಷಕರನ್ನು ಸೆಳೆಯುವಂತಹ ಹಾಡು ಮತ್ತು ರೊಮ್ಯಾನ್ಸ್ ದೃಶ್ಯಗಳಲ್ಲಿ ಭಾಗವಹಿಸಿದೆಯಂತೆ!

■ ಬಿಂದು

